ತುಸು ದೊಡ್ಡವಳಾದ ಮೇಲೆ ದಾವಣಗೆರೆಯ ‘ಕೆಬಿಆರ್ ಡ್ರಾಮಾ ಕಂಪನಿ’ಗೆ ಬಂದ ಅವರು, ‘ಹಳ್ಳಿ ಹುಡುಗಿ’ ನಾಟಕದಲ್ಲಿನ ಮೀಟಿಂಗ್ ಸೀನ್‌ನಲ್ಲಿ ನೃತ್ಯ ಮಾಡುತ್ತಿದ್ದರು. ಬಳಿಕ ಜಗಳೂರಿನ ಮೇರಿ ಅವರೊಂದಿಗೆ ಪಾತ್ರ ಮಾಡುವ ಅವಕಾಶ. ಆಗ ತಮ್ಮ ಬಳಿ ನಾಟಕದ ಪಾತ್ರಗಳಿಗೆ ತಕ್ಕಂತೆ ಉಡಲು ಬಟ್ಟೆ, ತೊಡಲು ಒಡವೆ ಇರಲಿಲ್ಲ. ಕನಿಷ್ಠ ಮೇಕಪ್ ಮಾಡಿಕೊಳ್ಳಲೂ ಆಗುತ್ತಿರಲಿಲ್ಲ. ಸಹನಟಿಯರು ಬೇಕಾದ ಪರಿಕರ ಕೊಡುತ್ತಿದ್ದರು ಎಂದು ನೆನಪಿಸಿಕೊಳ್ಳುತ್ತಾರೆ ಲಲಿತಮ್ಮ. ಆಗ ಅವರು ಲಲಿತಾಶ್ರೀ ಹೆಸರಿನಿಂದಲೇ ಉತ್ತರಕರ್ನಾಟಕದ ಕಲಾಪ್ರೇಮಿಗಳಲ್ಲಿ ಪ್ರಸಿದ್ಧಿಯಾಗಿದ್ದರು.

ದಾವಣಗೆರೆಯಲ್ಲಿರುವಾಗಲೇ ನಾಟ್ಯಾಚಾರ್ಯ ಶ್ರೀನಿವಾಸಚಾರ್ಯ ಕುಲಕರ್ಣಿ ಅವರ ಬಳಿ ನೃತ್ಯ ಕಲಿಯುತ್ತಿದ್ದ ಲಲಿತಾ ಅವರೊಂದಿಗೆ ಆರ್.ಟಿ. ರಮಾ ಮತ್ತು ಅವರ ಸಹೋದರಿಯೂ ನೃತ್ಯಾಭ್ಯಾಸಕ್ಕೆ ಬರುತ್ತಿದ್ದರು. ರಮಾ ಅವರು ಸಿನಿಮಾರಂಗದತ್ತ ಮುಖ ಮಾಡಿದರೆ, ಲಲಿತಾ ರಂಗಭೂಮಿಯಲ್ಲೇ ಉಳಿದರು. ಮುಂದೆ ಬ್ಯಾಡಗಿ ಚನ್ನಬಸಪ್ಪನವರ ಕಂಪನಿಯಲ್ಲಿ ‘ಕೊಂಡು ತಂದ ಗಂಡ’ ನಾಟಕದಲ್ಲಿನ ಭವಾನಿ ಎನ್ನುವ ಕುಂಟಿ ಪಾತ್ರದಲ್ಲಿ ಜನಪ್ರಿಯತೆಗೆ ತೆರೆದುಕೊಂಡ ಲಲಿತಾ, ಅಲ್ಲಿಂದ ರಾಜ್ಯದ ಬಹುತೇಕ ಕಂಪನಿಗಳಲ್ಲಿ ತಮ್ಮ ನೃತ್ಯ ಮತ್ತು ನಟನೆಯಿಂದಾಗಿ ಪ್ರವರ್ಧಮಾನಕ್ಕೆ ಬಂದರು. ವೃತ್ತಿಯ ಜತೆಗೆ ಅಮೆಚೂರ್ ಕಂಪನಿ ನಾಟಕಗಳಲ್ಲೂ ಅಭಿನಯಿಸತೊಡಗಿದರು.

ಬಳ್ಳಾರಿಯಲ್ಲಿ ಎಲಿವಾಳ ಸಿದ್ದಯ್ಯ, ಸುಭದ್ರಮ್ಮ ಮನ್ಸೂರ್, ದುರ್ಗಾದಾಸ್, ಮೈಸೂರಿನ ಸುಮತಿ, ಬೆಳಗಲ್ ವೀರಣ್ಣ ಅವರೊಂದಿಗಿನ ವೃತ್ತಿ ದಿನಗಳು ವೈಭವಯುತವಾಗಿದ್ದವು. ಆಗೆಲ್ಲಾ ಮೊಬೈಲ್ ಇರಲಿಲ್ಲ. ಆದರೆ, ಸುಭದ್ರಮ್ಮ ಅವರು ‘ಇಂಥ ಪಾತ್ರಕ್ಕೆ ಇಂತಿಷ್ಟು ಗೌರವಧನ ಕೊಡ್ತೀವಿ. ಇಂಥ ದಿನ ಬರಬೇಕು’ ಅಂತ ಒಂದು ಪೋಸ್ಟ್ ಕಾರ್ಡ್ ಹಾಕಿದರೆ ಸಾಕು ಅಲ್ಲಿ ಹಾಜರಿರುತ್ತಿದ್ದೆ ಎನ್ನುತ್ತಾರೆ ಲಲಿತಮ್ಮ.

ಬ್ಯಾಡಗಿಯ ರಾಘವೇಂದ್ರ ಇನಾಂದಾರ್ ಅವರಿಂದಾಗಿ ಧಾರವಾಡ ಆಕಾಶವಾಣಿಯ ಎಂ.ಎಸ್. ವಾಮನರಾವ್ ಅವರಿಗೆ ಪರಿಚಿತರಾದ ಲಲಿತಮ್ಮ, ಆಕಾಶವಾಣಿಯಲ್ಲೂ ನಾಟಕ–ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಇಬ್ಬರು ಅಕ್ಕಂದಿರು, ತಮ್ಮಂದಿರು ರಂಗಭೂಮಿಯ ಒಡನಾಟದಲ್ಲಿದ್ದರಿಂದ ಲಲಿತಮ್ಮ ತಂದೆಯವರ ನೇತೃತ್ವದಲ್ಲಿ ‘ಲಲಿತಕಲಾ ನಾಟ್ಯ ಸಂಘ’ ಸ್ಥಾಪಿಸಿದರು. ಆದರೆ, ವ್ಯವಹಾರ ಜ್ಞಾನವಿಲ್ಲದೇ ಕಂಪನಿಯಿಂದಾಗಿ ಕೈಸುಟ್ಟುಕೊಳ್ಳುವಂತಾಯಿತು.

ಆಕಾಶವಾಣಿಯ ವಾಮನರಾವ್ ಅವರಿಂದಾಗಿ ರಂಗಕರ್ಮಿ ಹಾಗೂ ಸಿನಿಮಾ ಸಂಭಾಷಣೆಕಾರ ಎಚ್.ಕೆ. ಯೋಗಾನರಸಿಂಹ ಅವರ ಒಡನಾಟಕ್ಕೆ ಬಂದ ಲಲಿತಮ್ಮ ಅವರಿಗೆ ಮುಂದೆ ಯೋಗಣ್ಣ ಅವರೇ ಅಕ್ಷರಾಭ್ಯಾಸ ಮಾಡಿಸಿ ಗುರುಗಳಾದರು. ಯೋಗಾನರಸಿಂಹ ಅವರ ‘ಸರ್ವೋದಯ ನಾಟ್ಯ ಸಂಘ’ದಲ್ಲಿ ಆಗ ವೃತ್ತಿರಂಗಭೂಮಿಯ ಜನಪ್ರಿಯ ನಟಿಯರಾದ ಥೆರೇಸಮ್ಮ, ಮಾರ್ತಾಂಡಮ್ಮ, ಶಿಗ್ಗಾವಿ ಲಕ್ಷ್ಮೀ ಇದ್ದರು. ‘ಇಂದ್ರಾಣಿ–ಸುಂದ್ರಾಣಿ’ ನಾಟಕದಲ್ಲಿ ಥೆರೇಸಮ್ಮ ಇಂದ್ರಾಣಿಯಾದರೆ, ಲಲಿತಮ್ಮ ಸುಂದ್ರಾಣಿಯಾಗಿ ಪ್ರೇಕ್ಷಕರಲ್ಲಿ ಮನೆಮಾತಾಗಿದ್ದರು. ಕಂಪನಿ ನಂಜನಗೂಡು ಕ್ಯಾಂಪಿನಲ್ಲಿದ್ದಾಗ ಯೋಗಾನರಸಿಂಹ ಅವರಿಗೆ ಕನ್ನಡದ ಚಿತ್ರರಂಗದ ಹಿರಿಯ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರಿಂದ ಬುಲಾವ್ ಬಂತು. ಯೋಗಣ್ಣ ಚಿತ್ರರಂಗದತ್ತ ಮುಖಮಾಡಿದರೆ, ಲಲಿತಮ್ಮ ಅಮೆಚೂರ್ ನಾಟಕ ಕಂಪನಿಗಳತ್ತ ತೆರಳಿದರು. ‘ಕಥಾಸಂಗಮ’ ಸಿನಿಮಾ ಶೂಟಿಂಗ್ ವೇಳೆ ಮತ್ತೆ ಯೋಗಣ್ಣ ಅವರು ಲಲಿತಮ್ಮ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ‘ಕಥಾಸಂಗಮ’ದಲ್ಲಿನ ‘ಹಂಗು’ ಕಥೆಯಲ್ಲಿ ಪ್ರೊಫೆಸರ್ ಅವರ ತಂಗಿಯ ಪಾತ್ರ ಮಾಡಿದ್ದ ಲಲಿತಮ್ಮ ಅವರಿಗೆ ಆಗ ಸಂದ ಪೇಮೆಂಟ್ 150 ರೂಪಾಯಿ. ಅದುವೇ ನನ್ನ ವೃತ್ತಿಜೀವನದಲ್ಲಿ ಪಡೆದ ದೊಡ್ಡ ಮೊತ್ತ ಎಂದು ಲಲಿತಮ್ಮ ನೆನಪಿಸಿಕೊಳ್ಳುತ್ತಾರೆ.

ಚಿತ್ರರಂಗದ ನಂಟು ಬೆಳೆದರೂ ವೃತ್ತಿರಂಗದ ಮೋಹದಿಂದಾಗಿ ಮತ್ತೆ ಸ್ವಂತ ಕಂಪನಿ ಕಟ್ಟಿದಾಗ ಲಲಿತಮ್ಮ ಅವರ ಜತೆಗೆ ಇದ್ದವರು ನಟ ಸದಾಶಿವ ಬ್ರಹ್ಮಾವರ, ಹಾವೇರಿಯ ಜುಬೇದಮ್ಮ. ಮತ್ತೆ ಕಂಪನಿ ನಷ್ಟದಲ್ಲಿದ್ದಾಗ ಕಲಾವಿದರಿಗೆ ಊಟ ಹಾಕಲೂ ಕಾಸಿಲ್ಲದ ಸ್ಥಿತಿ. ಆಗ ಲಲಿತಮ್ಮ ಅವರ ಕೈಹಿಡಿದದ್ದು ಪಿ.ಬಿ. ಧುತ್ತರಗಿ ಹಾಗೂ ಸುಳ್ಯದ ದೇಸಾಯಿ ಅವರ ಕಂಪನಿ. ‘‘ಧುತ್ತರಗಿ ಮತ್ತು ಸರೋಜಮ್ಮ ಧುತ್ತರಗಿ ಅವರನ್ನು ಅಪ್ಪಾಜಿ–ಅಮ್ಮ ಅಂತಲೇ ಕರೆಯುತ್ತಿದ್ದೆ. ಅವರ ಕಂಪನಿಯ ‘ಸಂಪತ್ತಿಗೆ ಸವಾಲ್’ ನಾಟಕದಲ್ಲಿ ನಾಯಕಿ ಪಾತ್ರ ನನ್ನದು. ಮುಂದೆ ಇದೇ ನಾಟಕ ಸಿನಿಮಾವಾಗಿ ಕನ್ನಡ ಚಿತ್ರರಂಗದಲ್ಲಿ ದಾಖಲೆ ಬರೆಯಿತು’’ ಎನ್ನುತ್ತಾರೆ ಲಲಿತಮ್ಮ.

ಮೈಸೂರಿನಲ್ಲಿ ‘ರಂಗನಾಯಕಿ’ ಸಿನಿಮಾದ ಶೂಟಿಂಗ್ ಇದ್ದಾಗ ಯೋಗಾನರಸಿಂಹ ಅವರಿಂದ ಮತ್ತೆ ನಟಿಸಲು ಬುಲಾವ್. ನಟಿ ಆರತಿ, ನಟರಾದ ಅಂಬರೀಷ್, ರಾಜಾನಂದ ಅವರೊಂದಿಗೆ ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳುವ ಅವಕಾಶ ಲಲಿತಮ್ಮ ಅವರದಾಯಿತು. ಮೈಸೂರಿನ ಒಂಟಿಕೊಪ್ಪಲಿನಲ್ಲಿ ಮನೆ ಮಾಡಿದ ಲಲಿತಮ್ಮ ‘ಹೊಸಬೆಳಕು’, ‘ಭಕ್ತ ಜ್ಞಾನದೇವ’, ‘ಗಾಳಿಮಾತು’, ‘ಮುನಿಯನ ಮಾದರಿ’ ಸೇರಿದಂತೆ ಹಲವು ಚಿತ್ರಗಳಲ್ಲಿ ಅವಕಾಶ ಪಡೆದರು. ಮತ್ತೆ ಅವರು ರಂಗಭೂಮಿಗೆ ಮರಳಿದ್ದು ‘ಹೊಳೆಹುಚ್ಚೇಶ್ವರ ನಾಟ್ಯ ಸಂಘ’ದ ಮೂಲಕ. ‘‘ಅಲ್ಲಿ ‘ಸಂಗೊಳ್ಳಿ ರಾಯಣ್ಣ’ ನಾಟಕದ ಚನ್ನಮ್ಮನ ಪಾತ್ರ, ‘ಸಮಾಜಕ್ಕೆ ಸವಾಲು’ ನಾಟಕದಲ್ಲಿ ಜ್ಯೋತಿ ಪಾತ್ರ ನನಗೆ ಹೆಚ್ಚು ಅಭಿಮಾನಿಗಳನ್ನು ಸೃಷ್ಟಿಸಿತ್ತು. ಅವೆರಡೂ ಪಾತ್ರಗಳು ಇಂದಿಗೂ ನನ್ನ ನೆಚ್ಚಿನ ಪಾತ್ರಗಳಾಗಿವೆಯೇ ಉಳಿದಿವೆ’’ ಎನ್ನುತ್ತಾರೆ.

‘ಪುಟ್ಟಣ್ಣ ಕಣಗಾಲ್ ಅವರಂಥ ದಿಗ್ಗಜರ ಸಿನಿಮಾಗಳಲ್ಲಿ ಅಭಿನಯಿಸಿದ್ದು, ರಾಜ್‌ಕುಮಾರ್ ಅವರಂಥ ಮೇರುನಟನ ಜೊತೆಗೆ ಅಭಿನಯಿಸಿದ್ದನ್ನು ತಮ್ಮ ಜೀವನದ ಸೌಭಾಗ್ಯ’ ಎಂದು ಬಣ್ಣಿಸುವ ಲಲಿತಮ್ಮ, ಮೈಸೂರು ಮತ್ತು ದಾವಣಗೆರೆಯಲ್ಲಿ ಸಂಘ ಕಟ್ಟಿಕೊಂಡು ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ಶಿಬಿರ, ಸಂಗೀತ ನೃತ್ಯ ತರಬೇತಿ ಸೇರಿದಂತೆ ಅನೇಕ ಜನೋಪಯೋಗಿ ಕೆಲಸಗಳನ್ನೂ ಮಾಡಿದ್ದಾರೆ.

ಹಲವು ಪ್ರಶಸ್ತಿಗಳಿಗೆ ಭಾಜನರಾಗಿರುವ ಅವರಿಗೆ ಇತ್ತೀಚೆಗಷ್ಟೇ ಎಸ್.ಪಿ. ವರದರಾಜು ಪ್ರಶಸ್ತಿ ಪ್ರಾಪ್ತವಾಗಿದೆ. ರಾಜ್ ಅವರ ಸಹೋದರನ ಹೆಸರಿನ ಪ್ರಶಸ್ತಿ ಪಡೆದ ಪುಳಕದಲ್ಲಿರುವ ಲಲಿತಮ್ಮ ತಮ್ಮ ಎಪ್ಪತ್ತೈದನೇ ವಯಸ್ಸಿನಲ್ಲೂ ರಂಗಭೂಮಿಯ ಮೇಲಿನ ಪ್ರೀತಿಯನ್ನು ಕಳೆದುಕೊಂಡಿಲ್ಲ.



ಪ್ರತಿಕ್ರಿಯಿಸಿ: feedback@sudha.co.in